‘ಮೊದಲ ವಿಶ್ವ ಪ್ರದಕ್ಷಿಣೆ’ಯ ದಾಖಲೆಗೀಗ ಐದು ಶತಮಾನ ತುಂಬಿದ ಸಂಭ್ರಮ. ಸುತ್ತಲಿನ ಜಗತ್ತಿನ ಬಗ್ಗೆ ಅಪರಿಮಿತ ಕುತೂಹಲದಿಂದ, ಮಾರಣಾಂತಿಕ ಅಪಾಯಗಳನ್ನು ಲೆಕ್ಕಿಸದೆ ಕೈಗೊಂಡ ಸಾಹಸಯಾತ್ರೆಯ ಉದ್ದಕ್ಕೂ ಸಾವುನೋವುಗಳ ಮುಖಾಮುಖಿ. ಆ ಯಾನದ ನಾಯಕತ್ವ ವಹಿಸಿದ್ದ ಫರ್ಡಿನೆಂಡ್ ಮೆಗಲಾನ್ ವಿಶ್ವದ ಮಹಾನ್ ನಾವಿಕರಲ್ಲೊಬ್ಬ. ಐದುನೂರು ವರ್ಷಗಳ ಹಿಂದೆ ಅವನು ಕೈಗೊಂಡಿದ್ದ ಸಾಹಸಯಾತ್ರೆ ಮುಂದಿನ ಅನೇಕ ಅನ್ವೇಷಣೆಗಳಿಗೆ ಮುನ್ನುಡಿ ಬರೆಯಿತು. 2022ರ ಸೆಪ್ಟೆಂಬರ್ 8ಕ್ಕೆ ಮೆಗಲಾನನ ಮೊದಲ ವಿಶ್ವ ಪ್ರದಕ್ಷಿಣೆಯ ಮಹಾಯಾನ ಮುಕ್ತಾಯವಾಗಿ 500 ವರ್ಷ. ಅನ್ವೇಷಣೆಯ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲಾದ ಮೆಗಲಾನ್‌ನ ಯಾನದ 500ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ, ಆ ರೋಮಾಂಚಕಾರಿ ಯಾನದ ಹಿನ್ನೆಲೆ, ಸ್ವರೂಪ ಹಾಗೂ ಮಹತ್ವಗಳನ್ನು ತಿಳಿಸುವ ವಿಶೇಷ ಲೇಖನವಿದು. ಚರಿತ್ರೆ, ಭೂಗೋಳ, ವಿಜ್ಞಾನ ಹಾಗೂ ತಂತ್ರಜ್ಞಾನಗಳಿಗೆ ಸಂಬಂಧಿಸಿದ ಅನೇಕ ವಿಷಯಗಳ ಪ್ರಸ್ತಾಪದೊಂದಿಗೆ ‘ಮೆಗಲಾನ್‌ನ ಸಾಹಸಯಾನ’ವನ್ನು ಕಟ್ಟಿಕೊಡುವ, ‘ಸುಧಾ’ ಓದುಗರಿಗಾಗಿ ರೂಪುಗೊಂಡ ಈ ಬರಹ ಕನ್ನಡ ಸಾಹಿತ್ಯಕ್ಕೆ ಹೊಸತು ಎನ್ನಿಸುವಂತಹದ್ದು.

